ಗಳಿಸಿದ್ದವು. ಇಂಥ ಭವರ್ ಲಾಲನಿಗೆ ತನ್ನ ಮಗ ಮುಂದೆ ಪಿಎಚ್.ಡಿ. ಮಾಡುವ ಸಂಗತಿ ಕಿಂಚಿತ್ತೂ ಇಷ್ಟವಿರಲಿಲ್ಲ. ಹಾಗಾಗಿ ಆಸ್ಕರ್ ವೈಲ್ಡನ ಗೈರುಹಾಜರಿಯಲ್ಲಿ ಅವನಿಗೆ ಆದಷ್ಟು ಬೇಗನೆ ಮದುವೆ ಮಾಡಲು ಹೆಣ್ಣು ಹುಡುಕುವ ಪ್ರಸ್ತಾಪವನ್ನು ತಂದೆ, ತಾಯಿ ಮತ್ತು ಹೆಂಡತಿಯ ಮುಂದೆ ಇರಿಸಿದ್ದ. ಆಸ್ಕರ್ ವೈಲ್ಡನಿಗೆ ಮದುವೆ ಮಾಡುವುದರಿಂದ ಅವನಲ್ಲಿ ವ್ಯಾಪಾರ ಮತ್ತು ಸಂಸಾರದ ಬಗ್ಗೆ ಜವಾಬ್ದಾರಿ ಹೆಚ್ಚಾಗುತ್ತದೆಂಬುದು ಭವರ್ ಲಾಲನ ವಾದವಾಗಿತ್ತು. ಹಾಗಾಗಿ ಆದಷ್ಟು ಬೇಗ ಅವನನ್ನು ಮದುವೆಗೆ ಒಪ್ಪಿಸಿ ಹೆಣ್ಣು ಹುಡುಕುವ ಕಾರ್ಯದಲ್ಲಿ ತೊಡಗಬೇಕೆಂದು ಅಪ್ಪ ಗುನ್ನಾಲಾಲನಿಗೆ ತಾಕೀತು ಮಾಡಿದ್ದ. ಭವರ್ ಲಾಲನ ಅಭಿಪ್ರಾಯ ಮನೆಯಲ್ಲಿ ಎಲ್ಲರಿಗೂ ಒಪ್ಪಿಗೆಯಾಗಿತ್ತು.

ಮಗ ಹೈಸ್ಕೂಲು ಮೆಟ್ಟಿಲು ಹತ್ತಿದಾಗ ಭವರ್ ಲಾಲನಿಗೆ ಆಲೋಚನೆಯೊಂದು ಮನಸ್ಸನ್ನು ಆಕ್ರಮಿಸಿತ್ತು. ಎಲ್ಲಾ ಶ್ರೀಮಂತರಿಗೆ ಇರುವಂತೆ ಅವನಿಗೂ ಐಡೆಂಟಿಟಿ ಕ್ರೈಸಿಸ್‌ನ ಬಾಧೆಯಿತ್ತು. ಮಗ ಸೋನಾಲಾಲ್ ತುಂಬಾ ಮುದ್ದಾಗಿದ್ದ. ಮನೆಯಲ್ಲಿ ಶ್ರೀಮಂತಿಕೆ ಕೈಕಾಲು ಮುರಿದುಕೊಂಡು ಬಿದ್ದಿತ್ತು. ಮುಂಬಯಿಯಲ್ಲಿ ಸಾವಿರಾರು ಮಂದಿ ಶ್ರೀಮಂತರಿದ್ದಾರೆ. ಆದರೆ ಸಾರ್ವಜನಿಕವಾಗಿ ಎಷ್ಟು ಜನ ಪ್ರಸಿದ್ಧರಾಗಿದ್ದಾರೆ? ತನ್ನ ಮಗನನ್ನು ಕ್ರಿಕೆಟ್ ಆಟಗಾರನನ್ನಾಗಿಯೋ ಇಲ್ಲ ಒಬ್ಬ ಸಿನಿಮಾ ನಟನನ್ನಾಗಿಯೋ ಮಾಡಿದರೆ ಹೇಗೆ? ಆದರೆ ಮಗನಿಗೆ ಎರಡರಲ್ಲೂ ಆಸಕ್ತಿಯಿಲ್ಲವೆನ್ನುವುದು ಭವರ್ ಲಾಲನಿಗೆ ನಿಧಾನವಾಗಿ ಅರಿವಾಗಿ ಆ ಪ್ರಯತ್ನವನ್ನು ಬಿಟ್ಟುಬಿಟ್ಟ. ಸಮಾಜದಲ್ಲಿ ದೊಡ್ಡ ಹೆಸರು ಮಾಡಲು ಬರೀ ಶ್ರೀಮಂತಿಕೆಯೊಂದಿದ್ದರೆ ಸಾಲದು, ಜೊತೆಗೆ ಅದೃಷ್ಟವೂ ಇರಬೇಕು! ಸಚಿನ್ ತೆಂಡೂಲ್ಕರ್, ಅಮಿತಾಭ್ ಬಚ್ಚನ್ ಅದೃಷ್ಟವಂತರು! ಅವರು ಅದೃಷ್ಟವಂತರಾಗುವ ಮೊದಲು ಶ್ರೀಮಂತರಾಗಿರಲಿಲ್ಲ!

ಭವರ್ ಲಾಲನ ಹೆಂಡತಿ ಅಹಲ್ಯಾ ರಾಣಿಯ ಕಡೆಯ ಸಂಬಂಧದಲ್ಲಿ ಒಂದು ಒಳ್ಳೆಯ ಹೆಣ್ಣು ಇತ್ತು. ಹೆಣ್ಣಿನ ಅಪ್ಪ ಭಜನ್ ಲಾಲ್ ಪುರಾನವಾಲೆಯು ಪುಣೆಯಲ್ಲಿ ಎರಡು ದೊಡ್ಡ ಫ್ಲೋರ್ ಮಿಲ್ಲುಗಳ ಓನರ್ ಆಗಿದ್ದನಲ್ಲದೆ, ಡ್ರೈಫ್ರೂಟ್ಸ್ ಎಕ್ಸ್‌ಪೋರ್ಟ್ ಬಿಸಿನೆಸ್ ಇತ್ತು. ಒಬ್ಬಳೇ ಮಗಳು. ಅವಳಿಗೊಬ್ಬ ಅಣ್ಣನಿದ್ದ. ಹುಡುಗಿ ಪ್ಯಾರಿಸ್‌ನಲ್ಲಿ ಮೂರು ವರ್ಷ ಇದ್ದು ಎಂಬಿಎ ಫಸ್ಟ್ ಕ್ಲಾಸಿನಲ್ಲಿ ಮುಗಿಸಿ ಬಂದಿದ್ದಳು. ಮತ್ತು ಸುಂದರವಾಗಿಯೂ ಇದ್ದಳು. ಹುಡುಗಿ ಎಂಬಿಎ ಓದಿರುವುದರಿಂದ ಮನೆಗೆ ತಂದುಕೊಂಡರೆ ತಮ್ಮ ವ್ಯಾಪಾರ ವಹಿವಾಟುಗಳ ಮೇಲೆ ಸಹ ನಿಗಾ ಇಡಬಹುದೆಂಬುದು ಅಹಲ್ಯಾ ರಾಣಿಯ ಇರಾದೆಯಾಗಿತ್ತು. ಈ ಬಗ್ಗೆ ಏಕೆ ಮುಂದುವರೆಯಬಾರದೆಂದು ಮನೆಯಲ್ಲಿ ಎಲ್ಲರಿಗೂ ಅನ್ನಿಸಿತ್ತು. ಅಜ್ಜಿ ಮತ್ತು ತಾಯಿಯೇ ವಿಷಯವನ್ನು ಆಸ್ಕರ್ ವೈಲ್ಡನ ಮುಂದೆ ಪ್ರಸ್ತಾಪಿಸಿದ್ದರು. ಆಸ್ಕರ್ ವೈಲ್ಡ್ ಮರುಮಾತನಾಡದೆ ಹೆಣ್ಣು ನೋಡಲು ಒಪ್ಪಿಬಿಟ್ಟ. ಅವನ ಈ ನಿರ್ಧಾರದ ಹಿಂದೆ ಅವನಿಗೆ ಪದೇ ಪದೇ ಬೀಳುತ್ತಿದ್ದ ಕನಸೇ ಕಾರಣವಾಗಿತ್ತು. ಈ ಮೂಲಕ ಕನಸಿನಲ್ಲಿ ಕಾಡುತ್ತಿದ್ದ ಗುಲಾಬಿ ಹುಡುಗಿಯ ಅನ್ವೇಷಣೆಯಲ್ಲಿ ತೊಡಗುವುದು ಅವನ ಬಯಕೆಯಾಗಿತ್ತು. ಕನಸಿನಲ್ಲಿ ಬರುತ್ತಿದ್ದವಳನ್ನು ವಾಸ್ತವದಲ್ಲಿ ಹುಡುಕಿ ಬಂಧಿಸಬೇಕು! ಆಸ್ಕರ್ ವೈಲ್ಡನ ಈ ನಿರ್ಧಾರ ಗುನ್ನಾಲಾಲನ ಮನೆಯಲ್ಲಿ ಸಂಭ್ರಮದ ವಾತಾವರಣವನ್ನು ಸೃಷ್ಟಿಸಿತ್ತು. ಮೊದಲು ಹುಡುಗಿಯನ್ನು ಮುಖತಃ ನೋಡಿ ಹುಡುಗ, ಹುಡುಗಿ ಇಬ್ಬರಿಗೂ ಪರಸ್ಪರ ಮೆಚ್ಚುಗೆಯಾದರೆ ನಂತರ ಜಾತಕಗಳನ್ನು ನೋಡಿ ಮುಂದುವರಿಯಬೇಕೆಂದು ಆಸ್ಕರ್ ವೈಲ್ಡ್ ಕಂಡೀಷನ್ ಇಟ್ಟಿದ್ದ. ಈ ಕಂಡೀಷನ್ ಒಂದು ರೀತಿ ಒಳ್ಳೆಯದೇ ಎಂದು ಎಲ್ಲರಿಗೂ ಅನ್ನಿಸಿತ್ತು.

ಒಳ್ಳೆಯ ಮುಹೂರ್ತ ನೋಡಿ ಪುಣೆಯ ಕೋರೆಗಾಂವ್ ಪಾರ್ಕ್‌ನಲ್ಲಿದ್ದ ಭಜನ್ ಲಾಲ್ ಪುರಾನೆವಾಲೆಯ ಐಷಾರಾಮಿ ಮನೆಯನ್ನು ಗುನ್ನಾಲಾಲನ ಕುಟುಂಬ ಪ್ರವೇಶಿಸಿತ್ತು. ಮನೆಯ ಪ್ರವೇಶ ದ್ವಾರವನ್ನು ಪ್ರವೇಶಿಸುತ್ತಿದ್ದಂತೆಯೇ ಒಂದು ಚಿನ್ನದ ಮತ್ತು ಒಂದು ಬೆಳ್ಳಿಯ ಶಿರಡಿ ಸಾಯಿಬಾಬಾರವರ ನಾಲ್ಕು ಅಡಿಯ ಪ್ರತಿಮೆಗಳು ಕಣ್ಣಿಗೆ ಬಿದ್ದಿದ್ದವು. ಭಜನ್ ಲಾಲ್ ಪುರಾನೆವಾಲೆಯು ಶಿರಡಿ ಸಾಯಿಬಾಬಾರ ಪರಮ ಭಕ್ತ. ವರ್ಷಂಪ್ರತಿ ಶಿರಡಿ ಸಾಯಿ ದೇವಾಲಯಕ್ಕೆ ಲಕ್ಷಾಂತರ ರೂಪಾಯಿ ದೇಣಿಗೆ ಕೊಡುತ್ತಾನೆ. ಶಿರಡಿಗೆ ಬರುವ ಭಕ್ತರಿಗಾಗಿ ಭಜನ್ ಲಾಲ್ ಉಚಿತವಾಗಿ ಒಂದು ದೊಡ್ಡ ಗೆಸ್ಟ್ ಹೌಸನ್ನು ಕಟ್ಟಿಸಿ ಅಲ್ಲಿ ಮೂರು ಹೊತ್ತೂ ಭಕ್ತರಿಗೆ ಉಚಿತ ಊಟ ತಿಂಡಿಯ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದ್ದಾನೆ. ತಾನು ಪುಣೆಯಲ್ಲಿ ಫ್ಲೋರ್ ಮಿಲ್ಲಿಗೆ ಪಾಯ ತೆಗೆಯುವಾಗ ಅಮೃತಶಿಲೆಯ ಶಿರಡಿ ಸಾಯಿಬಾಬಾ ವಿಗ್ರಹವೊಂದು ಸಿಕ್ಕಿತ್ತಂತೆ. ಅದು ಸಿಕ್ಕಿದ ಮೇಲೆ ಸಾಲದಲ್ಲಿದ್ದ ಭಜನ್ ಲಾಲ್ ಬಹುಬೇಗನೆ ತನ್ನ ಉದ್ಯಮದಲ್ಲಿ ಅಪಾರ ಲಾಭ ಗಳಿಸಿದನಂತೆ. ಜೊತೆಗೆ ಒಂದು ದಿನ ರಾತ್ರಿ ಸಾಯಿಬಾಬಾ ಕನಸಲ್ಲಿ ಬಂದು ಭಜನ್ ಲಾಲನಿಗೆ ಬೊಗಸೆ ತುಂಬಾ ಡ್ರೈಫ್ರೂಟ್ಸ್ ಹಾಕಿದ್ದರಂತೆ. ಭಜನ್ ಲಾಲ್ ಹಿಂದುಮುಂದು ನೋಡದೆ ಡ್ರೈಫ್ರೂಟ್ಸ್ ವ್ಯಾಪಾರ ಪ್ರಾರಂಭಿಸಿದನಂತೆ. ಹಾಗೆ ಪ್ರಾರಂಭವಾದ ವ್ಯಾಪಾರ ರಪ್ಪು ವ್ಯಾಪಾರಕ್ಕೆ ತಿರುಗಿ ಇಂದು ನೂರಾರು ಕೋಟಿಯ ವಹಿವಾಟಿನಿಂದ ಲೆಕ್ಕವಿಲ್ಲದಷ್ಟು ಲಾಭವನ್ನು ಗಳಿಸಿಕೊಡುತ್ತಿದೆ. ಮಗನಿಗೆ ಸಾಯಿರಾಮ್ ಎಂತಲೂ, ಮಗಳಿಗೆ ಸಾಯಿಪ್ರಭೆ ಎಂತಲೂ ಹೆಸರಿಟ್ಟು ತನ್ನ ಭಕ್ತಿಯನ್ನು ಮೆರೆದಿದ್ದಾನೆ. ಸಂಪ್ರದಾಯಸ್ಥ ಕುಟುಂಬವೆಂದು ಗುನ್ನಾಲಾಲನಿಗೆ ಆನಂದವಾಯಿತು.

ಗುನ್ನಾಲಾಲನ ಕುಟುಂಬವನ್ನು ನೋಡಿ ಭಜನ್ ಲಾಲ ಪುರಾನೆವಾಲೆಗೂ ಖುಷಿಯಾಗಿತ್ತು. ತನ್ನ ಮೊಮ್ಮಗನಿಗೆ ಎರಡು ಹೆಸರಿರುವುದಾಗಿ ಗುನ್ನಾಲಾಲ್ ಭಜನ್ ಲಾಲ್ ಕುಟುಂಬಕ್ಕೆ ಮೊದಲೇ ತಿಳಿಸಿದ್ದ. ಕ್ರಿಶ್ಚಿಯನ್ ಹೆಸರು ಕೇಳಿ ಭಜನ್ ಲಾಲ್ ಮೊದಲು ಗೊಂದಲಕ್ಕೆ ಬಿದ್ದನಾದರೂ ಗುನ್ನಾಲಾಲ್ ತನಗೂ, ತನ್ನ ಮೊಮ್ಮಗನಿಗೂ ಬಿದ್ದ ಕನಸಿನ ಚರಿತ್ರೆಯನ್ನು ಹೇಳಿದ ನಂತರ ಸಮಾಧಾನಗೊಂಡಿದ್ದ. ಹುಡುಗಿ ಸಂಪ್ರದಾಯಸ್ಥ ಗುಜರಾತಿ ಉಡುಪಿನಲ್ಲಿ ಕಂಗೊಳಿಸುತ್ತಿದ್ದಳು. ಹುಡುಗ, ಹುಡುಗಿಯ ಜಾತಕಗಳ ಹೊಂದಾಣಿಕೆಯ ಬಗ್ಗೆ ಇನ್ನೂ ಕೇಳಿರಲಿಲ್ಲವಾದ್ದರಿಂದ ಎರಡೂ ಕುಟುಂಬದವರು ಏನನ್ನೂ ಪರಸ್ಪರ ಬದಲಾಯಿಸಿಕೊಳ್ಳಲಿಲ್ಲ. ಬದಲಾಗಿ ಭಜನ್ ಲಾಲ್ ಸ್ನೇಹಿತರಿಗೆ ಊಟಕ್ಕೆ ಹಾಕುವಂತೆ ಭರ್ಜರಿ ಊಟದ ವ್ಯವಸ್ಥೆಯನ್ನು ಮಾಡಿದ್ದ. ಊಟದ ನಂತರ ಹುಡುಗ, ಹುಡುಗಿ ಒಂದರ್ಧ ಗಂಟೆಯ ಕಾಲ ಒಬ್ಬರನ್ನೊಬ್ಬರು ಮಾತನಾಡಿಕೊಳ್ಳಲು ಮಹಡಿಯ ರೂಮಿನಲ್ಲಿ ಅನುವು ಮಾಡಿಕೊಟ್ಟಿದ್ದರು ಎರಡೂ ಕುಟುಂಬದವರು.

ಆಸ್ಕರ್ ವೈಲ್ಡನಿಗೆ ಹೆಣ್ಣು ಮಕ್ಕಳೆಂದರೆ ಹಿಂಜರಿಕೆಯೇನೂ ಇರಲಿಲ್ಲ. ಶಾಲಾ ಕಾಲೇಜುಗಳಲ್ಲಿ ಹೆಣ್ಣು ಮಕ್ಕಳೊಂದಿಗೆ ಒಡಗೂಡಿ ವ್ಯಾಸಂಗ ಮಾಡಿದ್ದನಲ್ಲದೆ ಹೋಟೆಲ್, ಸಿನಿಮಾಗಳಿಗೂ ಹುಡುಗಿಯರೊಂದಿಗೆ ಅನೇಕ ಬಾರಿ ಮುಜುಗರವಿಲ್ಲದೆ ತಿರುಗಾಡಿದ್ದಾನೆ. ಆದರೆ ಇಂದೇಕೋ ಒಂದು ರೀತಿಯ ತಲ್ಲಣ ಸೃಷ್ಟಿಯಾಗಿರುವುದು ಅನುಭವಕ್ಕೆ ಬರುತ್ತಿದೆ. ಹುಡುಗಿ ಸುಂದರವಾಗಿಯೇನೋ ಇದ್ದಾಳೆ. ಆದರೆ ಕನಸಲ್ಲಿ ಬರುವ ಹುಡುಗಿಯ ಕಣ್ಣುಗಳಲ್ಲಿ ಇರುವ ಹೊಳಪು, ಮೈಯಲ್ಲಿನ ಒನಪು ವೈಯಾರಗಳು ಕಾಣುತ್ತಿಲ್ಲ. ಆದರೆ ಸೌಮ್ಯತೆಯನ್ನು ಮೈತುಂಬಿಕೊಂಡಿದ್ದಾಳೆ. ಹುಡುಗಿಯ ಕಡೆಯಿಂದ ಘಮ್ಮನೆಯ ಸುವಾಸನೆ ಹರಿದು ಬರುತ್ತಿದೆ. ಏನು ಮಾತನಾಡಬೇಕೆಂದು ಆಸ್ಕರ್ ವೈಲ್ಡ್ ತಡಕಾಡುತ್ತಿರುವಾಗಲೇ 'ನೀನು ಇಂಗ್ಲಿಷ್ ಲಿಟರೇಚರ್ ಓದಲು ಏಕೆ ಆಯ್ಕೆ ಮಾಡಿಕೊಂಡಿದ್ದು?' ಆಸ್ಕರ್ ವೈಲ್ಡನ ಮುಖ ನೋಡಿ ನಗುತ್ತಾ ಕೇಳಿದ್ದಳು. ಆಸ್ಕರ್ ವೈಲ್ಡ್ ಉತ್ತರಿಸಲು ಕ್ಷಣ ಒದ್ದಾಡಿ ನಂತರ ಸಾವರಿಸಿಕೊಂಡು 'ಹೀಗೇ ಇಷ್ಟವಾಯ್ತು, ಹಾಗಾಗಿ' ಎಂದ. 'ದಿ ನೈಟಿಂಗೇಲ್ ಅಂಡ್ ದಿ ರೆಡ್ ರೋಸ್ ಕನಸು ಬಿದ್ದಿದ್ದರಿಂದ ಅಲ್ಲವಾ?' ತಕ್ಷಣ ಕೇಳಿದ್ದಳು. ಅರೆ, ಅದು ನಿಜ. ಇವಳು ತನ್ನ ಮನಸ್ಸಿನ ಮೇಲೆ ನಿಯಂತ್ರಣ ಸಾಧಿಸುತ್ತಿರುವಳೇನೋ ಅನ್ನಿಸಿತು ಕ್ಷಣ. 'ಎಸ್, ನಿನ್ನ ಮಾತು ನಿಜ' ಮುಖದಲ್ಲಿ ನಗು ತರಿಸಿ ಹೇಳಿದ್ದ.

'ಫ್ರಾನ್ಸ್ ಕ್ರಾಂತಿ ಬಗ್ಗೆ ಓದಿದ್ದೀಯಾ?' ಪ್ರಶ್ನಿಸಿದ್ದಳು ಸಾಯಿಪ್ರಭೆ ಎಂಬ ಬೆಡಗಿ. ಮತ್ತೆ ತಡಕಾಡುವಂತಾಯಿತು ವೈಲ್ಡನಿಗೆ. 'ಯಾವಾಗಲೋ ಒಮ್ಮೆ ಓದಿದ್ದೀನಿ. ನನಗೆ ಹಿಸ್ಟರಿ ಸಬ್ಜೆಕ್ಟ್ ಅಂದರೆ ಅಷ್ಟಕ್ಕಷ್ಟೆ. ಲಿಟರೇಚರ್ ನನ್ನ ಫೇವರಿಟ್ ಸಬ್ಜೆಕ್ಟ್. ಎಂಎ ಇಂಗ್ಲಿಷ್ ಸೇರಿದ ಮೇಲಂತೂ ಬೇರೆಲ್ಲ ಸಬ್ಜೆಕ್ಟ್ಸ್ ಆಲ್ ಮೋಸ್ಟ್ ಮರೆತಂತೆ ಆಗಿದೆ' ಪ್ರಾಮಾಣಿಕವಾಗಿಯೇ ಹೇಳಿದ್ದ ವೈಲ್ಡ್.

'ನಾನು ಎಂಬಿಎ ಓದಲು ಫ್ರಾನ್ಸಿಗೆ ಹೋದಾಗ ಮೊದಲ ಕ್ಲಾಸಿನಲ್ಲೇ ಫ್ರಾನ್ಸಿನ ಮಹಾಕ್ರಾಂತಿಯ ಬಗ್ಗೆ ಮೂರು ಗಂಟೆ ಲೆಕ್ಚರ್ ಇತ್ತು. ಕ್ಲಾಸ್ ಮುಗಿದಾಗ ಕೆಲವರು ಬಿಕ್ಕಿ ಬಿಕ್ಕಿ ಅಳುತ್ತಿದ್ದರು.